**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ :21.02.2025**

**ಪಾಟೀ ಸವಾಲು - 3 ಮತ್ತು 4 ನೇ ಪ್ರತಿವಾದಿಗಳ ಪರ ವಕೀಲರಿಂದ :**

ದಾವ ಸ್ವತ್ತು ದಿನಾಂಕ 02.12.2004 ರಂದು ನಮ್ಮ ತಂದೆಗೆ ದರ್ಖಾಸ್ತು ಮೂಲಕ ಮಂಜೂರು ಆಗಿರುತ್ತದೆ ಎಂದರೆ ಸರಿ. ನನಗೆ ಈಗ 32 ವರ್ಷ ವಯಸ್ಸು. 2 ನೇ ವಾದಿಗೆ ಈಗ 37 ವರ್ಷ ವಯಸ್ಸು. 2004 ರಲ್ಲಿ ಮಂಜೂರು ಆದಾಗ ನನಗೆ 12 ವರ್ಷ ಹಾಗೂ 2 ನೇ ವಾದಿಗೆ 17 ವರ್ಷ ವಯಸ್ಸು ಎಂದರೆ ಸರಿ. ನಾನು 9 ನೇ ತರಗತಿ ಓದಿರುತ್ತೇನೆ. ನಮ್ಮ ತಾಯಿ ಅನರಕ್ಷಸ್ಥರು. ದಾವ ಸ್ವತ್ತು ನಮ್ಮ ತಂದೆಗೆ ಮಂಜೂರು ಆದಾಗ ನಮ್ಮ ತಾಯಿ ಮನೆ ಕೆಲಸ ಮಾಡುತ್ತಿದ್ದರು. 2004 ರಲ್ಲಿ ನಮ್ಮ ತಂದೆಗೆ ಮಂಜೂರಾದಗ ನಾನು, 1 ಮತ್ತು 2 ನೇ ವಾದಿಗಳು ಮನೆಯ ಆಚೆ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ಆ ಸಮಯದಲ್ಲಿ ವಾದಿಗಳಿಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿ. ದಾವ ಸ್ವತ್ತು ನಮ್ಮ ತಂದೆಯ ಏಕಾಏಕ ಸ್ವತ್ತು ಎಂದರೆ ಸರಿ. ಸರ್ಕಾರದಿಂದ ಸ್ವತ್ತು ದರ್ಖಾಸ್ತು ಆಗಿರುವ ಬಗ್ಗೆ ಮುಂಜೂರಾತಿ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ನಾನು ಈಗ ಒಂದು ದಾಖಲೆಯನ್ನು ನೋಡುತ್ತಿದ್ದು, ಸದರಿ ದಾಖಲೆ ನಮ್ಮ ತಂದೆಗೆ ಆಗಿರುವ ದರ್ಖಾಸ್ತು ಪ್ರಮಾಣ ಪತ್ರದ ಪ್ರತಿಯನ್ನು ಒಪ್ಪಿಕೊಂಡು ಅದನ್ನು **ನಿಡಿ-1** ಎಂದು ಗುರುತಿಸಲಾಯಿತು. ನಮ್ಮ ತಂದೆ ಸರ್ಕಾರಕ್ಕೆ 667 ರೂಪಾಯಿಗಳನ್ನು ಜಮಾ ಮಾಡಿ ದರ್ಖಾಸ್ತು ಮಾಡಿಸಿಕೊಂಡಿದ್ದಾರೆಂದರೆ ಸರಿ. ನಿಡಿ-1 ರಲ್ಲಿ 15 ವರ್ಷ ಪರಭಾರೆ ಮಾಡಬಾರದು ಎಂದು ನಮೂದು ಇದೆ ಎಂದರೆ ಸರಿ. ನಿಪಿ-4 ರಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ಗೊತ್ತು. 2016 ರಲ್ಲಿ ನಮ್ಮ ಚಿಕ್ಕಮ್ಮ ಮತ್ತು ಅವರು ಮಕ್ಕಳು ಅಸಲು ದಾವೆ ಸಂಖ್ಯೆ 594/2016 ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆ ಏನಾಯಿತು ಎಂದು ನನಗೆ ಗೊತ್ತಿಲ್ಲ. ಸದರಿ ದಾವೆ ವಜಾಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ವಾದ ಪತ್ರದಲ್ಲಿ ನಾವು ದಾವ ಸ್ವತ್ತಿನ ಸ್ವಾದೀನ ಹೊಂದಿರುತ್ತೇವೆಂದು ಹೇಳಿರುತ್ತೇನೆಂದರೆ ಸರಿ. ನಮ್ಮ ತಂದೆಗೆ ಮುಂಜೂರು ಆಗಿರುವ ಸ್ವತ್ತಿನ ವಿಸ್ತೀರ್ಣ 20 ಗುಂಟೆ ಹಾಗೂ 3 ಗುಂಟೇ ಖರಾಬು. ನಾವು 2000 ಇಸವಿಯಿಂದ ವಾದ ಪತ್ರದಲ್ಲಿ ತೋರಿಸಿದ ಸರ್ಜಾಪುರ ರಸ್ತೆ ವಿಳಾಸದಲ್ಲಿ ವಾಸವಾಗಿರುತ್ತೇವೆ. ಇಬ್ಬಲೂರಿನಿಂದ ದಾವ ಸ್ವತ್ತಿಗೆ ಸುಮಾರು 60 ಕೀ.ಮೀ ಅಂತರ ಇರುತ್ತದೆ. ನಮ್ಮ ತಂದೆ 2014 ರಲ್ಲಿ ಮರಣ ಹೊಂದಿರುತ್ತಾರೆ. ನಮ್ಮ ತಂದೆ ಮರಣ ಹೊಂದಿದ ನಂತರ ನಮ್ಮ ಕುಟುಂಬದ ಜವಬ್ದಾರಿಯನ್ನು ನಮ್ಮ ತಾಯಿ ನೋಡಿಕೊಳ್ಳುತ್ತಿದ್ದರು. ನಮ್ಮ ತಂದೆ 2014 ರಲ್ಲಿ ಮರಣ ಹೊಂದಿದ ತಕ್ಷಣ ದಾವ ಸ್ವತ್ತಿನಲ್ಲಿ ನಾವು ಭಾಗ ಕೇಳಿರುವುದಿಲ್ಲ ಎಂದರೆ ಸರಿ. ನಮ್ಮ ತಂದೆ 2012 ರಲ್ಲಿ ಸರ್ಕಾರದಿಂದ ದಾವ ಸ್ವತ್ತನ್ನು ಕ್ರಯ ಮಾಡಲು ಅನುಮತಿ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸರ್ಕಾರದವರು ಅನುಮತಿ ನೀಡುವಾಗ ನಮ್ಮ

ತಂದೆಯಿಂದ 5 ಲಕ್ಷ ರೂಪಾಯಿಗಳನ್ನು ಜಮಾ ಮಾಡಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಆ ಬಗ್ಗೆ ಗೊತ್ತಿದ್ದರೂ ಸಹ ಈ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

**Sd/-**
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ..**